ವುದರಿಂದ ದಯಮಾಡಿ ಉತ್ತರವನ್ನು ತಾವೇ ಕೊಟ್ಟರೂ ಪರವಾಗಿಲ್ಲ. ಇಲ್ಲ ಉತ್ತರವನ್ನು ಕೊಡಿಸಿದರೂ ಪರವಾಗಿಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಏನು ಸನ್ಮಾನ್ಯ ಜಯಚಂದ್ರರವರು ಶೂನ್ಯವೇಳೆಯಲ್ಲಿ ಲೋಕಸೇವಾ ಆಯೋಗದಿಂದ ಮೋಟಾರು ವಾಹನ ನಿರೀಕ್ಷಕರ ವಿಷಯದ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದಾರೆ. ನಾನು ಈ ಬಗ್ಗೆ ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಈ ಬಗ್ಗೆ ಉತ್ತರವನ್ನು ಕೊಡಿಸುತ್ತೇನೆ.

ಅಧ್ಯಕ್ಷರು : ಆಯಿತು. ಶ್ರೀ ಎ. ಮಂಜುರವರು ಮಾತನಾಡಿ. ಇವರು ಸದನದಲ್ಲಿ ಇಲ್ಲ. ಈಗ ವಿತ್ತೀಯ ಕಲಾಪ. ತಾವು ಪ್ರಾರಂಭ ಮಾಡಿ.

ವಿತ್ತೀಯ ಕಾರ್ಯಕಲಾಪ :
"2010–2011ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ"

ಶ್ರೀ ಟಿ.ಬಿ. ಜಯಚಂದ್ರ (ಶಿರಾ) : ಮಾನ್ಯ ಸಭಾಧ್ಯಕ್ಷರೆ, ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಬೇಕಾಗಿತ್ತು. ಒಂದು ವಿರೋಧಪಕ್ಷದ ನಾಯಕರು ಆಯವ್ಯಯದ ಮೇಲೆ ಮಾತನಾಡುವಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇರಬೇಕಾದಂತಹ ಪದ್ಧತಿ ಇದೆ ಅಥವಾ ಸಂಪ್ರದಾಯವು ಕೂಡ ಇದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಇಲ್ಲವೆಂದು ನೀವು ಖಾಸಗಿಯಾಗಿ ಹೇಳಿದ್ದೀರಿ. ಎಲ್ಲಿ ಹೋಗಿದ್ದಾರೆ ಏನು ಎಂಬುವುದನ್ನು ನಮಗೆ ಗೊತ್ತಿಲ್ಲ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಪತ್ರವನ್ನು ಬರೆದು ಅನುಮತಿಯನ್ನು ಕೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಮುಖ್ಯಮಂತ್ರಿಗಳು ಬರುವುದು ಸ್ವಲ್ಪ ತಡವಾಗಬಹುದು ಎನ್ನುವ ಕಾರಣಕ್ಕಾಗಿ, ಇನ್ನು ಸ್ವಲ್ಪ ಹೊತ್ತಿನಲ್ಲಿ ಅವರು ಬರುತ್ತಾರೆ.

(12-50 PM)

ಈಗ ಸದನದಲ್ಲಿರುವ ಬಹಳಷ್ಟು ಜನ ಸದಸ್ಯರ ಮಧ್ಯೆ ಒಂದು ಗೊಂದಲ ಇದೆ. ಬಿ.ಬಿ.ಎಂ.ಪಿ. ಚುನಾವಣೆ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ಸದನ ಎಷ್ಟು ದಿವಸ ನಡೆಸಬೇಕು, ಏನು ಮಾಡಬೇಕು ಎನ್ನುವಂಥ ವಿಚಾರವನ್ನು ಪ್ರತಿಪಕ್ಷದವರನ್ನು ಕೇಳಿ ಇವತ್ತು ತೀರ್ಮಾನ ಮಾಡುತ್ತೇವೆಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೊರಗಡೆಯೇ ಹೇಳಿಬಿಟ್ಟಿದ್ದಾರೆ. ಈಗ ನಮಗೇನಾಗಿದೆ ಎಂದರೆ ಸದನ ನಡೆಯುತ್ತದೆಯೇ ಇಲ್ಲವೇ ಎಂಬ ಅನುಮಾನ ಬಂದಿದೆ. ಅದಕ್ಕೆ ದಯಮಾಡಿ ನಾನು ಹೇಳುವುದರಲ್ಲಿ ಎರಡು ವಿಚಾರ ಇದೆ. ಒಂದು ವಿರೋಧ ಪಕ್ಷದ ನಾಯಕರು ಇವತ್ತು ಆಯವ್ಯಯದ ಮೇಲೆ ಮಾತನಾಡಬೇಕಾದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರಬೇಕಾದಂಥ ಸಂಪ್ರದಾಯವಿದೆ, ಆದರೆ ಅವರು ಇವತ್ತು ಇಲ್ಲಿ ಇಲ್ಲದಿರುವ ಸಂದರ್ಭ ಇದ್ದು ಅದೊಂದು ಶೂನ್ಯವಿದೆ. ಆಮೇಲೆ ಇನ್ನೊಂದು, ಸದನ ಎಷ್ಟು ದಿವಸ ನಡೆಯುತ್ತದೆ ಏನು ಎನ್ನುವುದು ಕೂಡ ಇದೆ. ಅದಕ್ಕೆ ಇವತ್ತು Business Advisory Committee ಕರೆದು ತೀರ್ಮಾನ ಮಾಡಿದರೆ ಅದು ಸೂಕ್ತವಾಗುತ್ತದೆನ್ನುವುದು ನನ್ನ ಭಾವನೆ. ಸಿದ್ದರಾಮಯ್ಯನವರು ಈಗ ಐದು ನಿಮಿಷದಲ್ಲಿ ಸದನಕ್ಕೆ ಬರುತ್ತಾರೆ. ಅದು ವರೆಗೂ bills introduction ಮಾಡಿ.

ಅಧ್ಯಕ್ಷರು : ಬಿಲ್ ಮಂಡನೆ ಮಾಡಿ, ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು:

7. ಶಾಸನ ರಚನೆ :

ಅ) ವಿಧೇಯಕಗಳನ್ನು ಮಂಡಿಸುವುದು

(1) ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಹಾಗೂ ಇತರೆ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕ, 2009.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) : ಮಾನ್ಯ ಅಧ್ಯಕ್ಷರೇ, 2009ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಹಾಗೂ ಇತರೆ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತಿದ್ದೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;